## 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಬಂದಾಗ ಗಾಂಧೀಜಿ ಫುಲ್‌ಸೂಟ್ ಧರಿಸಿದ್ದರು. ಗೋಖಲೆಯವರ ಸಲಹೆ ಮೇರೆಗೆ ಒಂದು ವರ್ಷಕಾಲ ರೈಲಿನ ಮೂರನೇ ದರ್ಜೆ ಬೋಗಿಯಲ್ಲಿ ಕುಳಿತು ದೇಶ ಸುತ್ತಿದ್ದರು.



ಖಂಡತುಂಡವಾಗಿ ಹೇಳಿದ್ದು ಮಹತ್ವದ ವಿಚಾರವಾಗಿದೆ. ಧರ್ಮ, ಧರ್ಮಗ್ರಂಥ, ರಾಷ್ಟ್ರೀಯತೆಗಳ ವಿಚಾರದಲ್ಲಿ ಗಾಂಧೀಜಿಯವರ ಈ ನಿಲುವು ಇಂದಿಗೂ ಪ್ರಸ್ತುತವಾಗಿದೆ. ಮೂಲಭೂತವಾದಿಗಳ ಮುಖಕ್ಕೆ ರಾಚಿದಂತಿದೆ. ಹೀಗಾಗಿಯೇ ಗೋಡ್ಸೆಭಕ್ತರು ಗಾಂಧಿಗೆ ವಿರೋಧಿಗಳಾಗಿದ್ದಾರೆ. ಗಾಂಧಿ, ನೆಹರೂ ಅವರನ್ನು ಒಟ್ಟಾಗಿಸಿ ವಿತಂಡವಾದದಿಂದ ಬಯ್ಗುಳ ಬಲಿಪೀಠದ ಮೇಲೆ ನಿಲ್ಲಿಸುತ್ತಿದ್ದಾರೆ. ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಧಾರ್ಮಿಕ ಮೂಲಭೂತವಾದಿ, ಜಾತಿವಾದಿ ಪಡೆಗಳಿಗೆ ಪಟ್ಟ ಕಟ್ಟುವುದಕ್ಕೆ ಪೂರಕವಾಗಿ ಅಂಬೇಡ್ಕರ್ ನಿಷ್ಠರು, ಪ್ರಗತಿಪರರು, ಅಷ್ಟೇಕೆ ಎಲ್ಲ ಮಾನವತಾವಾದಿಗಳು ವರ್ತಿಸಬಾರದು. ಇಲ್ಲಿಯೇ ಗಾಂಧೀಜಿಯವರ ಮೇಲೆ ಆಗಿರುವ ಅಂಬೇಡ್ಕರ್ ಅವರ ಪ್ರಭಾವದ ಒಂದು ಉದಾಹರಣೆಯನ್ನು ಹೇಳಬೇಕು. ನಾನು ಗ್ರಹಿಸಿದಂತೆ ಗಾಂಧೀಜಿಯವರು ಅಂಬೇಡ್ಕರ್ ಅವರ ಭೇಟಿ ಮತ್ತು ವಿಚಾರಗಳಿಂದ ಪ್ರೇರಣೆ ಪಡೆದು ಬದಲಾಗುತ್ತ ಬಂದಿರಬಹುದು. ಜೊತೆಗೆ ಅಪ್ಪಟ ನಾಸ್ತಿಕವಾದಿ, ಆಂಧ್ರದ 'ಗೋರಾ' ಅವರ ಜೊತೆಗಿನ ಸಂವಾದದಿಂದಲೂ ಪ್ರೇರೇಪಿತರಾಗಿರಬಹುದು, ನಾಸ್ತಿಕವಾದಿ ಗೋರಾ ಅವರೇ ಸ್ವತಃ ಗಾಂಧೀಜಿಯವರಿಂದ ಎಷ್ಟು ಪ್ರಭಾವಿತರಾಗಿದ್ದರೆಂದರೆ ತಮ್ಮ ಒಬ್ಬ ಮಗನಿಗೆ 'ಲವಣ' (ಉಪ್ಪು) ಎಂದು ಹೆಸರಿಟ್ಟರು. ಇದು ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹಕ್ಕೆ ಸ್ಪಂದಿಸಿದ ಒಂದು ಸಕಾರಾತ್ಮಕ ರೀತಿಯಾಗಿದೆ. ಇದೇ ಗೋರಾ ಅವರ ಅಳಿಯ ಗಾಂಧೀಜಿಯವರ ಶಿಷ್ಯತ್ವವನ್ನು ಸ್ವೀಕರಿಸಬೇಕೆಂದು ಬಂದಾಗ ಗಾಂಧಿ ಹೇಳಿದ ಮಾತುಗಳೇ ಅವರ ಮೇಲೆ ಆಗಿರುವ ಅಂಬೇಡ್ಕರ್ ಪ್ರಭಾವಕ್ಕೊಂದು ಉದಾಹರಣೆ. ಗಾಂಧಿ ಹೀಗೆ ಹೇಳಿದರು: 'ನೀನು ಅಂಬೇಡ್ಕರ್ ಅವರ ಹಾಗಾಗಬೇಕು, ನೀನು ಅಸ್ಪೃಶ್ಯತೆಯ ಹಾಗೂ ಜಾತಿಯ ನಿರ್ಮೂಲನಕ್ಕಾಗಿ ಕೆಲಸ ಮಾಡಬೇಕು. ಯಾವ ಬೆಲೆ ತೆತ್ತರೂ ಸರಿಯೆ, ಅಸ್ಪೃಶ್ಯತೆಯು ಹೋಗಲೇಬೇಕು.'

ನನಗನ್ನಿಸುತ್ತದೆ; ಸಣ್ಣಪುಟ್ಟ ಭಿನ್ನಾಭಿಪ್ರಾಯ ಮತ್ತು ತಪ್ಪುಗಳ ನಡುವೆಯೂ ಸಮಾನತೆ, ಸಹಿಷ್ಣುತೆಗಳ ಸಾಧಕರನ್ನು ಸಮಾನವಾಗಿ ಗೌರವಿಸುವ ಸಹಿಷ್ಣುತೆಯನ್ನು ಪ್ರಗತಿಪರರೆನಿಸಿಕೊಂಡ ನಮ್ಮಂಥವರು ಮೊದಲು ರೂಢಿಸಿಕೊಳ್ಳಬೇಕು. ಜನರೆಲ್ಲ ರೂಢಿಸಿಕೊಳ್ಳಬೇಕೆಂದು ಹೇಳುವ ವಿಶ್ವಾಸಾರ್ಹತೆಯನ್ನು ಗಳಿಸಬೇಕು. ಇಲ್ಲದಿದ್ದರೆ ಈ ದೇಶವು ಏಕಸಂಸ್ಕೃತಿ, ಏಕಧರ್ಮ, ಏಕನಾಯಕತ್ವಗಳ ಸುಳ್ಳು ಸುಳಿಯಲ್ಲಿ ಸಿಕ್ಕಿ ಸತ್ವವನ್ನು ಸಾಯಿಸುತ್ತದೆ. ಅಂಬೇಡ್ಕರ್ ಹೇಳಿದ 'ಸಾಮಾಜಿಕ ಪ್ರಜಾಪ್ರಭುತ್ವ'ದ ಮೂಲ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಸೋದರತೆಗಳನ್ನು ನಾಶಮಾಡಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಗಾಂಧಿ, ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ, ಭಗತ್‌ಸಿಂಗ್, ಬೋಸ್ ಮುಂತಾದವರ ವಿಚಾರಗಳನ್ನು ಎರಕ ಹೊಯ್ದ ಕ್ರಿಯೆಗೆ ಆದ್ಯತೆ ನೀಡಬೇಕು. ಇದು ಹೇಗೆ ಸಾಧ್ಯವಾಗಬಹುದೆಂಬುದಕ್ಕೆ ಗಾಂಧಿ ಮತ್ತು ಅಂಬೇಡ್ಕರ್ ಅವರ ಚಾರಿತ್ರಿಕ ನಿದರ್ಶನವನ್ನು ನೀಡುತ್ತೇನೆ. ಗಾಂಧೀಜಿ ಬ್ರಿಟಿಷ್ ವಸಹಾತುಶಾಹಿಯ ವಿರುದ್ಧ ಉಪ್ಪಿನ ಸತ್ಯಾಗ್ರಹ ಮಾಡಿದರು. ಅಂಬೇಡ್ಕರ್ ಭಾರತದ ವರ್ಣಾಹತುಶಾಹಿಯ ವಿರುದ್ಧ ಕೆರೆಯ ನೀರನ್ನು ಮುಟ್ಟುವ ಮಹಾನ್